ನನ್ನ ಓದು



**ಕಲ್ಲೇಶ್ ಕುಂಬಾರ್**

# ಹೃದಯಸಂವಾದದ ಕಥೆಗಳು!

ಮಲ್ಲಿಕಾರ್ಜುನ ಶೆಲ್ಲಿಕೇರಿ ಅವರ 'ಹವೇಲಿ ದೊರೆಸಾನಿ' ಸಂಕಲನದಲ್ಲಿನ ಕಥೆಗಳು, ಕಥೆಗಾರರ ಅನುಭವಗಳಷ್ಟೇ ಆಗಿರದೇ, ಆ ಅನುಭವಗಳನ್ನು ಮಾನವೀಯ ಪಾತಳಿಯ ಮೇಲಿಟ್ಟು ಗ್ರಹಿಸಿದ ಕ್ರಮಕ್ಕೆ ಕನ್ನಡಿ ಹಿಡಿಯುವ ಕೆಲಸವನ್ನೂ ಮಾಡುತ್ತವೆ. ಓದುಗನಾದವನು ಇಲ್ಲಿನ ಕಥೆಗಳನ್ನು ಬುದ್ಧಿಯ ಜೊತೆಗೆ ಭಾವಸಂವಾದದ ರೂಪದಲ್ಲೂ ಗ್ರಹಿಸಿದಾಗ, ನಮ್ಮ ಬದುಕಿನಲ್ಲಿ ಎದುರಾಗುವ ಸಂಘರ್ಷಗಳನ್ನು ಚಿಕಿತ್ಸಕ ದೃಷ್ಟಿಯಿಂದ ಅವಲೋಕಿಸುವ ಹಾಗೂ ಅರಿವಿನ ಕೇಡಿನಿಂದಾಗಿ ಉಂಟಾಗಬಹುದಾದ ಮನೋವಿಪ್ಲವಗಳ ಹಿಂದಿನ ಕಾರಣಗಳನ್ನು ಶೋಧಿಸುವ ಕೆಲಸವನ್ನು ಈ ಕಥೆಗಳು ಮಾಡುವುದು ಸ್ಪಷ್ಟವಾಗುತ್ತದೆ.

ಈ ಸಂಕಲನದಲ್ಲಿನ 'ಆ 12 ಗಂಟೆಗಳು...' ಕಥೆಯನ್ನು ನೋಡಿ: ಕಥೆಗಾರನಾದವನು ತನ್ನ ಬದುಕಿನ ತಿಳಿವಳಿಕೆಯ ನೆಲೆಯಲ್ಲಿ ಅನುಭವಕ್ಕೆ ಬಂದ ವಾಸ್ತವದ ಬದುಕಿನಲ್ಲಿ ಸಂಭವಿಸಿದ ಘಟನೆಯೊಂದನ್ನು ನಿರ್ಲಿಪ್ತ ಭಾವದಿಂದ ಕಥೆಯಾಗಿಸಿದಾಗ ಓದುಗನನ್ನು ತೀವ್ರವಾಗಿ ತಟ್ಟುತ್ತದೆ ಎಂಬ ಮಾತಿಗೆ ಈ ಕಥೆ ಸಾಕ್ಷಿಯಂತಿದೆ. ಕಥೆ ಓದುಗನನ್ನು ಸ್ಥಿತಪ್ರಜ್ಞನನ್ನಾಗಿಸಿಬಿಡುತ್ತದೆ. ಕಾಲ ಕಳೆದಂತೆ ಗಂಡ ಹೆಂಡತಿಯ ನಡುವಿನ ಬಾಂಧವ್ಯ ಅದೆಷ್ಟು ಗಾಢವಾಗಿ ಬೆಸೆದುಕೊಳ್ಳುತ್ತ ಹೋಗುತ್ತದೆ ಎಂಬುದಕ್ಕೆ ನಿದರ್ಶನದಂತಿರುವ ಈ ಕಥೆ ಎಲ್ಲರ ಬದುಕಿನ ಅನುಭವಗಳ ಮರುಶೋಧಕ್ಕೆ ಒತ್ತಾಯಿಸುತ್ತದೆ. ಕಥೆಗಾರರು ತಮ್ಮ ಬದುಕಿನಲ್ಲಿ ಘಟಿಸಿದ ಘಟನೆಯೊಂದನ್ನು ಕಥೆಯಾಗಿಸಿದ್ದಾರೆ. ಆ ಮೂಲಕ ತಾವು ಬದುಕಿನಲ್ಲಿ ಕಳೆದುಕೊಂಡ ಅಮೂಲ್ಯವಾದ ಜೀವವೊಂದಕ್ಕೆ ಮರುಜೀವ ನೀಡುವ ಪ್ರಯತ್ನ ಮಾಡಿದ್ದಾರೆ. ಈ ಕಥೆಯನ್ನು ಓದಿದ ಯಾರಿಗಾದರೂ ಕಳೆದುಕೊಂಡುದರ ಹಿಂದಿನ ಅಗಾಧವಾದ ನೋವಿನ ಅನುಭವವಾಗದೇ ಇರದು.

ಮಲ್ಲಿಕಾರ್ಜುನ ಅವರಿಗೆ ರಕ್ತ ಸಂಬಂಧವನ್ನು ಮೀರಿ ಮನುಷ್ಯ ಸಂಬಂಧಗಳಲ್ಲಿ ಅಗಾಧವಾದ ನಂಬಿಕೆ. ಈ ನಂಬಿಕೆಗೆ ಉದಾಹರಣೆಯಾಗಿ, 'ಮೂರನೇ ಪ್ಯಾರಾ' ಕಥೆ ಗಮನಿಸಬಹುದು. ಹೆತ್ತವರ ಕುರಿತು ಅಸಡ್ಡೆ, ಅಹಮಿಕೆ, ಆಸ್ತಿದಾಹ – ಇವೆಲ್ಲವುಗಳ ಕಾರಣದಿಂದಾಗಿ ರಕ್ತಸಂಬಂಧದಂಥ ಸಂಬಂಧಗಳು ಹೇಗೆ ಶಿಥಿಲಗೊಳ್ಳುತ್ತಿವೆ ಎಂಬುದನ್ನು ಈ ಕಥೆ ಕಾಣಿಸುತ್ತದೆ. ಗದಿಗೆಪ್ಪ ಮಾಸ್ತರರು ನೂರಾರು ವಿದ್ಯಾರ್ಥಿಗಳ ಉತ್ತಮ ಭವಿಷ್ಯವನ್ನು ಬರೆದವರು. ಕೊನೆಗಾಲದಲ್ಲಿ ಹೆಂಡತಿಯನ್ನು ಕಳೆದುಕೊಂಡು ಇಬ್ಬರು ಗಂಡುಮಕ್ಕಳ ಅಸಡ್ಡೆಯ ಕಾರಣವಾಗಿ ದಯನೀಯ ಬದುಕನ್ನು ಬಾಳುವಂತಾಗುತ್ತದೆ. ಆಗ ಮಗಳು ಸುನಂದಾ ಹಾಗೂ ಆಕೆಯ ಗಂಡ ಪ್ರಕಾಶನ ಆರೈಕೆಯಲ್ಲಿ ತಮ್ಮ ಅಂತ್ಯದ ದಿನಗಳನ್ನು ಕಳೆಯುವಂತಾಗುವುದು ದುರಂತವೆನಿಸುತ್ತದೆ. ಆ ದುರಂತವೇ ಗದಿಗೆಪ್ಪ ಮಾಸ್ತರರಿಗೆ ತಾವು ಗಳಿಸಿದ ಆಸ್ತಿಯಲ್ಲಿ ಸುನಂದಾಳಿಗೂ ಸಮಪಾಲು ಕೊಡುವಂತೆ ಮಾಡಲು ಪ್ರೇರೇಪಿಸಿ, ಅವರು 'ಮೃತ್ಯುಪತ್ರ'ದಲ್ಲಿ ಆ ವಿಚಾರವನ್ನು ದಾಖಲಿಸುತ್ತಾರೆ! ಈ ನಿರ್ಧಾರವೇ